ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2018–19 ದಿನಾಂಕ: 08–01–2019

# ಪತ್ರಿಕಾ ಆಮಂತ್ರಣ

1. ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಗೃಹರಕ್ಷಕ ದಳ, ಪೌರರಕ್ಷಣೆ ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆಗಳ ವೃತ್ತಿ ಸ್ಪರ್ಧೆ ಹಾಗೂ ಕ್ರೀಡಾಕೂಟ 2018–19

   ಉದ್ಘಾಟನೆ:

   ಎಂ.ಎನ್. ರೆಡ್ಡಿ,
   ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ಸಮಾದೇಷ್ಟರು, ಗೃಹರಕ್ಷಕ ದಳ, ನಿರ್ದೇಶಕರು ಪೌರ ರಕ್ಷಣೆ, ಮಹಾ ನಿರ್ದೇಶಕರು ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಹಾಗೂ ಮಹಾ ನಿರ್ದೇಶಕರು ರಾಜ್ಯ ವಿಪತ್ತು ಸ್ಪಂದನಾ ಪಡೆ, ಕರ್ನಾಟಕ ರಾಜ್ಯ

   ವಿಶೇಷ ಆಹ್ವಾನಿತರು:
   ಆಶಿಶ್ ಬಲ್ಲಾಳ್, ಅಂತಾರಾಷ್ಟ್ರೀಯ ಹಾಕಿ ಕ್ರೀಡಾಪಟು

ವಾಹನ ವ್ಯವಸ್ಥೆ: ಈ ಕಾರ್ಯಕ್ರಮದ ವರದಿಗಾಗಿ ಮಾಧ್ಯಮ ಪ್ರತಿನಿಧಿಗಳಿಗೆ ವಾಹನ ವ್ಯವಸ್ಥೆ ಮಾಡಲಾಗಿದ್ದು ವಾಹನವು ಅಂದು ಬೆಳಿಗ್ಗೆ 8–30 ಗಂಟೆಗೆ ವಾರ್ತಾ ಸೌಧದಿಂದ ನಿಗದಿತ ಸ್ಥಳದತ್ತ ತೆರಳಲಿದೆ. ಸಂಪರ್ಕ ಜಿ. ಮಂಜುನಾಥ್, ಮೊಬೈಲ್ 8277395702 ದೂರವಾಣಿ 080–22971575.

# ಪತ್ರಿಕಾ ಪ್ರಕಟಣೆ

ಸಂಖ್ಯೆ: 37/37

## ಎಸಿಬಿ ತನಿಖೆ

ಬೆಂಗಳೂರು, ಜನವರಿ 8 (ಕರ್ನಾಟಕ ವಾರ್ತೆ)

ದಿನಾಂಕ: 04.01.2019ರ ಸಾಯಂಕಾಲ ವಿಧಾನಸೌಧದ ಆವರಣದಲ್ಲಿ ಎಸ್. ಜೆ. ಮೋಹನ್‌ಕುಮಾರ್ ಎಂಬುವವರ ಬ್ಯಾಗಿನಲ್ಲಿ ದೊರೆತ ರೂ. 25,76,000/- ಮೊತ್ತಕ್ಕೆ ಸಂಬಂಧಪಟ್ಟಂತೆ ವಿಧಾನಸೌಧ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್‌ರವರು ಈ ದಿನ ದಿನಾಂಕ:08.01.2019 ರಂದು ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರನ್ನು ನೀಡಿರುತ್ತಾರೆ.

ಅವರು ನೀಡಿದ ದೂರಿನ ಮೇರೆಗೆ ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ಠಾಣೆಯಲ್ಲಿ ಎಸ್.ಜೆ.ಮೋಹನ್‌ಕುಮಾರ್ ಮತ್ತು ಇತರರ ವಿರುದ್ಧ ಕಲಂ.7 ಮತ್ತು 8 ಭ್ರಷ್ಟಾಚಾರ ಪ್ರತಿಬಂಧ ಕಾಯ್ದೆ-1988 ರಡಿಯಲ್ಲಿ ಪ್ರಕರಣ ದಾಖಲು ಮಾಡಿ ತನಿಖೆ ಕೈಗೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.